‘ಏನಪ್ಪಾ, ಹುಡುಗಿ ಫೋಟೋ ನೋಡಿದ್ಯ? ಇಷ್ಟ ಆಯ್ತಾ?’ ಎಂದು ಅಪ್ಪ ಕೇಳಿದರು. ಅವನ ಅಮ್ಮ ‘ಅಯ್ಯೋ, ಅವನಿಗೆ ತೋರಿಸಲಿಲ್ಲ. ನೇರವಾಗಿ ಹುಡುಗೀನೆ ನೋಡಿಬಿಡ್ಲಿ ಅಂತ ನಾವಿಬ್ಬರು ಮಾತಾಡಿಕೊಂಡೆವು ’ ಎಂದರು.

‘ಒಳ್ಳೆದಾಯಿತು. ಒಳ್ಳೆ ಹುಡುಗಿ, ಬುದ್ಧಿವಂತೆ, ಧೈರ್ಯವಂತೆ, ಎಲ್ಲರ ಜೊತೆಗೂ ಹೊಂದಿಕೊಂಡುಹೋಗ್ತಾಳೆ. ಯಾರಾದ್ರು ಒಬ್ಬರೇ ಕೆಲಸ ಮಾಡುತ್ತಿದ್ದರೆ ತಾನೂ ಕೈಜೋಡಿಸುತ್ತಾಳೆ’ ಎಂದರು.

ಹುಡುಗಿಯ ತಂದೆತಾಯಿಯರು ಸ್ವಾಗತ ಕೋರಿ ಒಳಗೆ ಬರಮಾಡಿಕೊಂಡರು. ಇವನು ತನ್ನ ಶೂ ಬಿಚ್ಚಿಟ್ಟು ಒಳಕ್ಕೆ ನಡೆದ. ಕುಶಲ ಮಾತುಕತೆಗಳೆಲ್ಲ ಆದ ಮೇಲೆ ಸೀರೆಯುಟ್ಟ ಹುಡುಗಿ ಬಂದಳು. ಬಸ್ ನಿಲ್ದಾಣದಲ್ಲಿ ಮೊನ್ನೆ ತಾನೆ ಸಿಕ್ಕಿದ್ದ ಸಲ್ವಾರ್ ಕಮೀಜ್ ಹಾಕಿಕೊಂಡಿದ್ದ ಹುಡುಗಿಯನ್ನು ಸೀರೆಯಲ್ಲಿ ನೋಡಿ ಇವನ ಎದೆ ಒಂದು ಬಡಿತವನ್ನು ತಪ್ಪಿಸಿತು. ಆಶ್ಚರ್ಯ—ಆತಂಕದಿಂದ ಅವಳ ಕಡೆ ನೋಡಿದ. ಅವಳು ತುಂಟ ನಗುವಿನಿಂದ ತನ್ನ ಪರಿಚಯವನ್ನು ದಾಟಿಸಿದಳು. ಅದು ಅವನಿಗೆ ಸಮಾಧಾನ ತಂದಿತ್ತು. ‘ಎಲಾ ಹುಡುಗಿ, ಅವತ್ತು ಎಷ್ಟು ಆಟ ಆಡಿಸಿದ್ದೆ’ ಎಂದುಕೊಂಡ.

ಹುಡುಗಿಯ ತಂದೆಯೂ ಅಷ್ಟೇ ಬುದ್ಧಿವಂತರು. ಲೋಕರೂಢಿ ಮಾತನಾಡುತ್ತ, ‘ನೀವಿರೋ ಮನೆ ಯಾವಾಗ ಕಟ್ಟಿದ್ದು?’ ಎಂದು ಕೇಳಿದರು, ಸ್ವಂತದ್ದೋ ಬಾಡಿಗೆಯದೋ ಎಂದು ಅರಿತುಕೊಳ್ಳಲು! ‘ಇಲ್ಲ, ನಾವಿರೋ ಮನೆ ನಾನು ಕಟ್ಟಿಸಿದ್ದಲ್ಲ’ ಎಂದು ಇವನ ತಂದೆ ಹೇಳಿದಾಗ ಅವರಿಗೆ ಸ್ವಲ್ಪ ಪಿಚ್ಚೆನಿಸಿತ್ತು. ಆದರೆ ಅವರೇ ಮುಂದುವರೆದು ‘ಈಗ ಐದು ವರ್ಷದ ಕೆಳಗೆ ಕಟ್ಟಿಸಿದ್ದ ಮನೆಯನ್ನೇ ಕೊಂಡುಕೊಂಡು ಬಿಟ್ಟೆ’ ಎಂದರು.

‘ಹೊ, ಸರಿ ಸರಿ. ಕಟ್ಟಿಲ್ಲದಿದ್ದರೆ ಏನು? ಒಳ್ಳೆ ಏರಿಯಾದಲ್ಲೇ ನೋಡಿ ಕೊಂಡುಕೊಂಡಿದ್ದೀರಿ’ ಎಂದು ಹುಡುಗಿಯ ತಂದೆ ಸಂತಸ ವ್ಯಕ್ತಪಡಿಸಿದರು.

ಸ್ವಲ್ಪ ಸಮಯದ ಅನಂತರ ಹುಡುಗನ ಕಡೆ ತಿರುಗಿ, ‘ನೀವು ಆಫೀಸಿಗೆ ಹೇಗೆ ಓಡಾಡ್ತೀರಿ?’ ಎಂದು ಕೇಳಿದರು. ಅವನು ಉತ್ತರಿಸುವ ಮೊದಲೇ, ಅವರ ಮಗಳು ‘ಬಹುಶಃ ಸ್ಕೂಟರಿನಲ್ಲೋ ಬೈಕಿನಲ್ಲೋ ಹೋಗ್ತಾರಪ್ಪ’ ಎಂದು ಅವನ ಕಡೆ ತುಂಟನಗೆ ಬೀರುತ್ತ ಹೇಳಿದಳು.

‘ನಿನಗೆ ಹೇಗೆ ಗೊತ್ತಮ್ಮ?’ ಎಂದು ಹುಡುಗನ ತಾಯಿ ಆಶ್ಚರ್ಯದಿಂದ ಕೇಳಿದರು.

‘ಇಲ್ಲ, ಅವರು ಶೂ ಬಿಚ್ಚುವಾಗ ನೋಡಿದೆ. ತಳ ಒಂದು ಚೂರು ಸವೆದಿರಲಿಲ್ಲ. ಬಸ್ಸಲ್ಲೋ, ನಡೆದುಕೊಂಡೋ ಓಡಾಡಿದ್ರೆ ಹಾಗೆ ಇರಲ್ಲ ಅಲ್ವಾ? ಅದಕ್ಕೆ ಗೆಸ್ ಮಾಡಿದೆ’ ಎಂದು ಅವನ ಕಡೆ ಕುಡಿನೋಟ ಹರಿಸಿ, ಅವನ ತಾಯಿಯ ಹೆಮ್ಮೆಯ ಮುಖವನ್ನು ಗಮನಿಸಿದಳು.

ತಿಂಡಿ, ಕಾಫಿಗಳೆಲ್ಲ ಆದ ಮೇಲೆ ಹುಡುಗಿಗೆ ಬರುವ ಅಡುಗೆ, ಹಾಡು, ಹಸೆ, ಕಂಪ್ಯೂಟರ್ ಎಲ್ಲದರ ಗುಣಗಾನದ ಪಟ್ಟಿಯನ್ನು ಹೆಚ್ಚು ಅನ್ನಿಸದಂತೆ ತಿಳಿಸಿದರು. ಇನ್ನು ಹುಡುಗನ ತಂದೆ ತಾಯಿಯರು ಅಷ್ಟೇ ಸೂಕ್ಷ್ಮವಾಗಿ ತಮ್ಮ ಮಗನ



ಹಿರಿಮೆಯನ್ನು ತಿಳಿಸಿದರು.

‘ನನ್ನ ಮಗ ಅಂತಲ್ಲ, ಅವನಿಗೆ ಯಾವ ದುರಾಭ್ಯಾಸವೂ ಇಲ್ಲ!’ ಎಂದು ಅವನ ತಾಯಿ ಬೀಗಿದರು. ‘ಪಾನ್ ಬೀಡಾನು ಹಾಕಲ್ಲ ಅಲ್ವ?’ ಎಂದು ಇವಳು ಅವನ ಕಡೆ ತುಂಟನಗೆ ಬೀರುತ್ತ ಕೇಳಿದಾಗ, ಅವನಿಗೆ ನಗು ತಡೆಯುವುದು ಬಹಳ ಕಷ್ಟವಾಯಿತು.

ಅವನ ತಾಯಿ ಆಶ್ಚರ್ಯದಿಂದ ‘ನಿನಗೆ ಹೇಗೆ ಗೊತ್ತಮ್ಮ?’ ಎಂದು ಕೇಳಿದರು. ಅವಳು ಮುಗ್ಧ ಮುಖ ಮಾಡಿಕೊಂಡು, ‘ಅವರು ನಕ್ಕಾಗ ಅವರ ಹಲ್ಲು ನೋಡಿ ಅಂತಹ ಅಭ್ಯಾಸ ಇಲ್ಲ ಅಂದುಕೊಂಡೆ!’ ಎಂದಾಗ ಇವನ ತಾಯಿಗೆ ಖುಷಿಯೋ ಖುಷಿ. ‘ಹೌದಮ್ಮ, ಅವನು ಎಲ್ಲಾದರೂ ಊಟಕ್ಕೆ ಹೋದರೆ ಅಲ್ಲಿಂದ ಬೀಡಾ ನನಗೇ ತಂದುಕೊಡೋದು’ ಎಂದು ಹೆಮ್ಮೆಯಿಂದ ಹೇಳಿದರು. ಅವನಿಗೋ ಇವಳು ತಮ್ಮ ಭೇಟಿಯಾದ ಪ್ರಸಂಗ ಎಲ್ಲಿ ಹೇಳಿಬಿಡುತ್ತಾಳೋ ಅನ್ನುವ ಆತಂಕ. ಜೊತೆಗೆ ಅವಳು ಹೀಗೆ ಆಟ ಆಡುತ್ತಿರುವುದನ್ನು ನೋಡಿ, ತಡೆಯಲಾಗದ ನಗು ಬೇರೆ.

ಇಬ್ಬರೇ ಮಾತನಾಡಲು ಅವನನ್ನು ತನ್ನ ಕೋಣೆಗೆ ಕರೆದುಕೊಂಡು ಹೋದಳು. ಬಾಗಿಲನ್ನು ಸ್ವಲ್ಪ ಓರೆ ಮಾಡಿ, ತನ್ನ ಕಿವಿಗಳನ್ನು ಎರಡು ಕೈಗಳಲ್ಲಿ ಅಡ್ಡಕ್ಕೆ ಹಿಡಿದು, ‘ದಯವಿಟ್ಟು ನನ್ನ ಕ್ಷಮಿಸಿಬಿಡಿ. ಇವತ್ತು ಅಂಕಲ್ ಹೇಳಿದಾಗಲೇ ನೀವು ನನ್ನ ಫೋಟೋ ನೋಡಿರ್ಲಿಲ್ಲ ಅಂತ ಸ್ಪಷ್ಟವಾಯಿತು. ನಾನು ನಿಮ್ಮ ಫೋಟೋ ನೋಡಿದ್ದ ಹಾಗೆ ನೀವು ನೋಡಿರುತ್ತೀರಿ ಅಂತ ಅವತ್ತು ತಪ್ಪು ಊಹೆ ಮಾಡಿದ್ದೆ’ ಎಂದು ಕ್ಷಮೆ ಕೇಳಿದಳು.

‘ಏನ್ರೀ ನೀವು, ಅವತ್ತು ಹಾಗೆ ಪ್ರಶ್ನೆ ಮಾಡಿ ನನ್ನನ್ನು ತಬ್ಬಿಬ್ಬು ಮಾಡಿದ್ರಿ. ಅವತ್ತು ನಿಮಗೆ ಗೊತ್ತಾದ ವಿಷಯಗಳನ್ನ ಇವತ್ತು ಹೀಗೆ ನನ್ನ ಮೇಲೆ ಪ್ರಯೋಗ ಮಾಡೋದ? ಇದು ಸರಿನಾ?’ ಎಂದು ಆಕ್ಷೇಪಿಸಿದ.

‘ಸಾರಿ, ಮನಃಪೂರ್ವಕವಾಗಿ ಸಾರಿ ಕೇಳ್ತಾ ಇದ್ದೀನಿ. ಅವತ್ತು ನೀವು ನನ್ನ ಫಾಲೋ ಮಾಡ್ತಾ ಇದ್ದೀರಿ ಅಂತ ಕೋಪ ಬಂದಿತ್ತು. ಅದಕ್ಕೆ ಹಾಗೆ ಕೇಳಿದ್ದೆ’.

‘ಒಂದು ವೇಳೆ ಫಾಲೋ ಮಾಡ್ತಾ ಇದ್ದಿದ್ರೆ, ಏನ್ ಮಾಡ್ತಾ ಇದ್ರಿ?’

‘ಗೊತ್ತಾಗದ ಹಾಗೆ ಫಾಲೋ ಮಾಡೋಕೆ ಬರಲ್ಲ ಅಂತ ಗೊತ್ತಾಗಿದ್ರೆ, ಇವತ್ತು ನೀವು ಇಲ್ಲಿಗೆ ಬರೋಕೆ ಬಿಡ್ತಿರಲಿಲ್ಲ. ಆದರೆ ‘ನೀವು ನನ್ನ ಫಾಲೋ ಮಾಡ್ತಾ ಇರ್ಲಿಲ್ಲ, ಅಂದ್ರೆ ನನ್ನ ಫೋಟೋ ಇನ್ನು ನೋಡಿಲ್ಲ’ ಅಂತ ನನಗೆ ಎರಡನೇ ಪ್ರಶ್ನೆಗೆ ಗೊತ್ತಾಗಿ ಹೋಗಿತ್ತು’.

‘ಮತ್ತೆ ಅಷ್ಟೆಲ್ಲ ಪ್ರಶ್ನೆ ಕೇಳಿ ಯಾಕೆ ನನ್ನ ಗೋಳುಗುಟ್ಟಿಸಿದ್ರಿ?’ ಸ್ವಲ್ಪ ಬೇಸರದಿಂದ ಕೇಳಿದ.

ಅವಳು ಕಿಸಕ್ಕನೆ ನಕ್ಕು, ‘ಹೇಳುವುದಿಲ್ಲ’ ಎಂದು ತಲೆ ಆಡಿಸಿದಳು.

‘ಇಲ್ಲ. ನನಗೆ ಸ್ಪಷ್ಟವಾಗಬೇಕು. ನೀವು ಉತ್ತರ ಹೇಳಲೇಬೇಕು’ ಎಂದು ಇವನು ಆಗ್ರಹಪಡಿಸಿದ.

ತಲೆ ಕೆಳಗೆ ಮಾಡಿ, ‘ಆಗ ನೀವು ತುಂಬಾ ಕ್ಯೂಟಾಗಿ ಕಾಣ್ತಾ ಇದ್ರಿ. ಅದಕ್ಕೆ ಇನ್ನು ಸ್ವಲ್ಪ ಹೊತ್ತು ನೋಡೋಣ ಅಂತ ಪ್ರಶ್ನೆಗಳನ್ನು ಕೇಳುತ್ತಾ ಹೋದೆ’ ಎಂದಳು.

ಇದನ್ನು ಕೇಳಿ ಅವನ ಕೋಪವೆಲ್ಲ ಇಳಿದುಹೋಗಿ, ಮುಖದಲ್ಲಿ ಮುಗುಳುನಗೆ ಮೂಡಿತು.

‘ನೀವು ಎಷ್ಟೆಲ್ಲ ಮಾಡಿದ್ದೀರಿ ಅಂತ ಆಚೆ ಹೇಳಿ ಬಿಡ್ತಾ?’ ಎಂದು ಛೇಡಿಸಿದ.

‘ನೀವು ಹಾಗೆ ಮಾಡುವುದಿಲ್ಲ. ಅದಕ್ಕೆ ನಿಮ್ಮ ಸ್ವಾಭಿಮಾನ ಅಡ್ಡ ಬರುತ್ತೆ ಅಂತ ನನಗೆ ಚೆನ್ನಾಗಿ ಗೊತ್ತು. ಆ ವಿಚಾರಾನಾ ನಿಮ್ಮಮ್ಮಂಗೂ ಹೇಳಿಲ್ಲ ಅನ್ನೋದು ನನಗೆ ಈಗಾಗಲೇ ಮನವರಿಕೆ ಆಗಿಹೋಗಿದೆ’ ಎಂದಳು.

ಹಲವು ವಿಚಾರಗಳ ಮಾತುಕತೆಯಾದ ಮೇಲೆ ‘ಮದುವೆಯಾಗೋಣ’ ಎಂದು ಪರಸ್ಪರ ನಿರ್ಧರಿಸಿದರು. ಅವಳ ತಾಯಿ ಮತ್ತೊಂದು ಲೋಟ ಕಾಫಿ ತಂದು ಕರೆದಾಗಲೇ, ಉಳಿದವರು ಇನ್ನೂ ಆಚೆ ಕುಳಿತಿದ್ದಾರೆ ಎಂದು ಇವರಿಗೆ ಅರಿವಾಗಿದ್ದು.

ಅವನು ಹೊರಟು ಬಾಗಿಲ ಬಳಿ ಬಂದಾಗ, ‘ಇನ್ನು ಮೇಲೆ ನಿಮಗೆ ಇನ್ನೊಂದು ಕೆಲಸ ಜಾಸ್ತಿ ಆಗುತ್ತೆ!’ ಎಂದಳು.

‘ಏನು?’ ಎಂದು ಅವಳತ್ತ ನೋಡಿದ.

‘ಇನ್ನು ಮೇಲೆ ಎರಡು ಬೀಡಾ ತರಬೇಕಾಗುತ್ತೆ!’ ಎಂದು ನಕ್ಕಳು.

‘ನಿಮಗೂ?’

ಅವನ ಪ್ರಶ್ನೆಗೆ, ಅವನ ಕಣ್ಣಲ್ಲಿ ಕಣ್ಣಿಟ್ಟು ತುಂಟನಗೆಯೊಡನೆ ಅವಳು ತಲೆ ಆಡಿಸಿದಳು.

ಪ್ರತಿಕ್ರಿಯಿಸಿ: feedback@sudha.co.in